ಮುಖ್ಯ ಇಂಜಿನಿಯರ್‌ರವರ ಕಛೇರಿ,
ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ,
ಆನಂದರಾವ್ ವೃತ್ತ,
ಬೆಂಗಳೂರು – 560 009.

ಕಛೇರಿ : 080- 22871094, 22871174
Website : https : //waterresources.karnataka.gov.in
ಇ–ಮೇಲ್ : bngwrdo@gmail.com

# ಜಲ ಸಂಪನ್ಮೂಲ ಇಲಾಖೆ

ದಿನಾಂಕ : 19 JUL 2023

ಸಂಖ್ಯೆ : ಜಸಅ/205/ಇಎಸ್‌ಎಂ/ದ್ವಿದಸ/ಬ್ಯಾಕ್‌ಲಾಗ್/2021

## ಪ್ರಕಟಣೆ

**ಜಲ ಸಂಪನ್ಮೂಲ ಇಲಾಖೆಯ ಪರಿಶಿಷ್ಟ ಜಾತಿಯ ದ್ವಿತೀಯ ದರ್ಜೆ ಸಹಾಯಕ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಯ ಸ್ಥಿತಿಗತಿ (Status) ಬಗ್ಗೆ ಮಾಹಿತಿ.**

******

ಈ ಕಛೇರಿ ಅಧಿಸೂಚನೆ ಸಂಖ್ಯೆ: ಜಸಅ/205/ಇಎಸ್‌ಎಂ/ದ್ವಿದಸ/ಬ್ಯಾಕ್‌ಲಾಗ್/2021, ದಿನಾಂಕ: 23–09–2022ರ ಕ್ರಮಸಂಖ್ಯೆ 2ರಲ್ಲಿ ಆಯ್ಕೆ ವಿಧಾನ (2)ರಲ್ಲಿ ಈಗಾಗಲೇ ತಿಳಿಸಿರುವಂತೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್/ 13/ಎಸ್‌ಬಿಸಿ/2001 ದಿನಾಂಕ: 21–11–2001ರ ಆದೇಶದಂತೆ ವಯೋಮಿತಿಗೆ ಆದ್ಯತೆ ನೀಡಲಾಗಿದೆ. ವಿದ್ಯಾರ್ಹತೆ ಕುರಿತಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 81 ಸೇವನೇ 2017, ದಿನಾಂಕ: 27–02–2018ರಂತೆ ಕ್ರಮ ವಹಿಸಲಾಗುತ್ತಿದೆ.

ಜಲ ಸಂಪನ್ಮೂಲ ಇಲಾಖೆಯ ಪರಿಶಿಷ್ಟ ಜಾತಿಯ ದ್ವಿತೀಯ ದರ್ಜೆ ಸಹಾಯಕ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗಾಗಿ ಎನ್.ಐ.ಸಿ. ಅವರ ತಂತ್ರಾಂಶದ ವರದಿಯೊಂದಿಗೆ ಮೆರಿಟ್ ಹಾಗೂ ಪ್ರವರ್ಗವಾರು ವಯೋಮಿತಿ ಆಧಾರದ ಮೇಲೆ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲನೆಗಾಗಿ ಪಡೆಯಲಾಗಿರುತ್ತದೆ.

ನೇಮಕಾತಿ ಪ್ರಕ್ರಿಯೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸದಸ್ಯರನ್ನೊಳಗೊಂಡಂತೆ ದಿನಾಂಕ:03–09–2021ರಂದು ರಚಿಸಲಾದ ಸಮಿತಿ ಮುಂದೆ ಅಭ್ಯರ್ಥಿಗಳು ಸಲ್ಲಿಸಿರುವ ಮೂಲ ಪ್ರಮಾಣ ಪತ್ರಗಳು ಪರಿಶೀಲನೆಗಾಗಿ ಬಂದಿರುತ್ತದೆ. ಮೇಲ್ನೋಟಕ್ಕೆ ಸದರಿ ಪರಿಶೀಲನೆಯಲ್ಲಿ ಕೆಲವು ಪ್ರಮಾಣ ಪತ್ರಗಳು ಅನುಮಾನಸ್ಪದವಾಗಿ ಕಂಡುಬಂದ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ಸಲ್ಲಿಸಿರುವ ಮೂಲ ದಾಖಲಾತಿಗಳ ನೈಜತೆಯನ್ನು ಪರಿಶೀಲನೆಗಾಗಿ ಸಂಬಂಧಿಸಿದ ಮಂಡಳಿ/ಸಂಸ್ಥೆಗಳಿಗೆ ಕಳುಹಿಸಲಾಗಿದೆ. ಸದರಿ ಮಂಡಳಿ/ಸಂಸ್ಥೆಯಿಂದ ನೈಜತೆಯ ಪರಿಶೀಲನೆಯ ನಂತರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಬೇಕೆಂದು ಚರ್ಚಿಸಲಾಗಿರುತ್ತದೆ.

ನೈಜತೆಯ ವರದಿಗಳು ಸಂಬಂಧಿಸಿದ ಸಂಸ್ಥೆಗಳಿಂದ ಸ್ವೀಕರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಮುಖ್ಯವಾಗಿ ಐ.ಟಿ.ಐ. ವಿದ್ಯಾರ್ಹತೆಯ ನೈಜತೆ ವರದಿ ಸಂಬಂಧಿಸಿದ ಮಂಡಳಿ/ಸಂಸ್ಥೆಯಿಂದ ಮತ್ತು ಯೋಜನಾ ನಿರಾಶ್ರಿತರು/ನಿರ್ವಸಿತರು ಸಲ್ಲಿಸಿರುವ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ತಾಲ್ಲೂಕು ಕಛೇರಿಯಿಂದ ಹಾಗೂ ಅಂಗವಿಕಲ ಚೇತನರ ಪ್ರಮಾಣ ಪತ್ರಗಳ ನೈಜತೆ ಪರಿಶೀಲನಾ ವರದಿಗಳು ಇಲ್ಲಿಯವರೆಗೆ ಸ್ವೀಕೃತವಾಗಿರುವುದಿಲ್ಲ. ಸದರಿ ಸಂಸ್ಥೆಗಳಿಂದ ನೈಜತೆ ದೃಢೀಕರಣ ಬಂದ ಕೂಡಲೇ ಸಮಿತಿಯ ಅನುಮೋದನೆಯೊಂದಿಗೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಕ್ರಮವಹಿಸಲಾಗುವುದು ಎಂಬ ಅಂಶವನ್ನು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

ಅಧ್ಯಕ್ಷರು,
ಪರಿಶಿಷ್ಟ ಜಾತಿ ಬ್ಯಾಕ್‌ಲಾಗ್ ದ್ವಿದಸ
ಹುದ್ದೆಗಳ ನೇಮಕಾತಿ ಆಯ್ಕೆ ಸಮಿತಿ ಹಾಗೂ
ಮುಖ್ಯ ಇಂಜಿನಿಯರ್,
ಜಲಸಂಪನ್ಮೂಲ ಇಲಾಖೆ, ಬೆಂಗಳೂರು.

19/7/23

19/7

ಪ್ರತಿಯನ್ನು ಜಿಯೋಮೆಟಿಕ್ಸ್ ಘಟಕ ಇವರಿಗೆ ನೀಡುತ್ತಾ, ಸದರಿ ಪ್ರಕಟಣೆಯನ್ನು ಜಲ ಸಂಪನ್ಮೂಲ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.